# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಯವ/ಕೊಉ/ಪಿಆರ್/ /2020-21

ಸಹಾಯಕ ಅಭಿಯಂತರರ ಕಛೇರಿ
ಕೊಡಿಗೇಹಳ್ಳಿ ಉಪವಿಭಾಗ, ಯಲಹಂಕ ವಲಯ
9ನೇ ಅಡ್ಡರಸ್ತೆ, ಡಿ ಬ್ಲಾಕ್
ಸಹಕಾರನಗರ, ಬೆಂಗಳೂರು 560092
ದಿನಾಂಕ: 21/11/2020

**ದಿನಾಂಕ: 21-11-2020 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-**

**ಸಭೆಗೆ ಹಾಜರಿದ್ದವರು:**

- ಶ್ರೀ ಗುರು, ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ಡಾ॥ ಪ್ರೇಮಾನಂದ್, ಆರೋಗ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಿಗೇಹಳ್ಳಿ.
- ಶ್ರೀ. ಡಾ॥ ದಯಾಕರ್, ಆರೋಗ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಿಗೇಹಳ್ಳಿ.
- ಶ್ರೀಮತಿ. ಚಿಂತನ, ಸಹಾಯಕ ಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) (**BWSSB**)
- ಶ್ರೀಮತಿ. ರಶ್ಮಿ, ತೋಟಗಾರಿಕೆ ಅಧೀಕ್ಷಕರು, ತೋಟಗಾರಿಕೆ
- ಶ್ರೀಮತಿ. ಕವಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು, ಘನ ತ್ಯಾಜ್ಯ
- ಶ್ರೀ. ಮಂಜುನಾಥ್, ಹಿರಿಯ ಆರೋಗ್ಯ ಪರಿವೀಕ್ಷಕರು, ಅರೋಗ್ಯ
- ಶ್ರೀ. ಗೋವಿಂದರಾಜು, ಅಭಿಯಂತರರು, (BESCOM)

**ವಾರ್ಡ್ ಸಮಿತಿ ಸದಸ್ಯರು**

- ಶ್ರೀ. ಅಂತೋನಿದಾಸ್, ಸಹಕಾರನಗರ, ವಸತಿ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ
- ಶ್ರೀಮತಿ. ಶಾಂತಮ್ಮ, ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
- ಶ್ರೀ. ಪ್ರಕಾಶ್, ಮಾರುತಿನಗರ, ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು
- ಶ್ರೀ ಶ್ರೀಕಾಂತ್, ಆರ್ಮ್ಕೋ ಬಡಾವಣೆ, ಸದಸ್ಯರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾಯದರ್ಶಿಗಳಾದ ಶ್ರೀ. ಪ್ರವೀಣ್ ಎ.ಆರ್. ರವರು ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿಯ ಸದಸ್ಯರುಗಳು ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಹಿಂದಿನ ಸಮಸ್ಯೆಗಳನ್ನು ಪರಿಹರಿಸಿದ್ದೇವೆ ಎಂದು ಹೇಳಿದರು.

ಬಿ.ಡಬ್ಲ್ಯೂ.ಎಸ್‌ಎಸ್.ಬಿ ರವರು ಎಲ್.ಕೆ.ಆರ್. ಬಡಾವಣೆಯಲ್ಲಿ ಸದರಿ ಬೋರ್‌ವೆಲ್‌ನಲ್ಲಿ ನೀರು ನಿಂತು ಹೋಗಿರುವುದರಿಂದ ಪರ್ಯಾಯ ಬೋರ್‌ವೆಲ್ ಕೊಳವೆಬಾವಿಯನ್ನು ಕೊರೆಸಿ ಕೊಡುವುದಾಗಿ ಸಹಾಯಕ ಅಭಿಯಂತರರು ಶ್ರೀಮತಿ. ಚಿಂತನಾ ರವರು ತಿಳಿಸಿದರು ಹಾಗೂ ಕೊಡಿಗೇಹಳ್ಳಿ ಅಂಡರ್ ಪಾಸ್‌ನಲ್ಲಿರುವ ಮ್ಯಾನ್‌ಹೋಲ್ ಅನ್ನು ಮುಂದಿನವಾರದೊಳಗೆ ಕಟ್ಟಿಸಿ ಕೊಡುವುದಾಗಿ ಹೇಳಿದರು.

SWD ಸಮಸ್ಯೆಗಳ ಬಗ್ಗೆ ನೋಡೆಲ್ ಅಧಿಕಾರಿಗಳು ವಿಚಾರಿಸಿದರೂ ಹಾಗೂ ಶ್ರೀ ಪ್ರವೀಣ್ ಕಿರಿಯ ಅಭಿಯಂತರರು ದಿನಾಂಕ:20.11.2020 ರಂದು SWD ಅಧಿಕಾರಿಗಳ ಜೊತೆ ಜಂಟಿ ಪರಿವೀಕ್ಷಣೆಯನ್ನು ನಡೆಸಲಾಯಿತು ಹಾಗೂ SWD ಅಧಿಕಾರಿಗಳು ಮಳೆಗಾಲದಲ್ಲಿ ನೀರಿನಿಂದ ಉಂಟಾಗುವ ಸಮಸ್ಯೆಯನ್ನು ಬಗೆಹರಿಸಿಕೊಡುತ್ತಾರೆಂದು ಹೇಳಿದರು.

ಶ್ರೀ ಅಂತೋನಿ ದಾಸ್ ರವರು ಸಹಕಾರನಗರದಲ್ಲಿ ಎಲ್‌ಇಡಿ ಬಲ್ಬ್‌ಗಳ ಸಮಸ್ಯೆಯು ಬಹಳವಾಗಿ ಇದೆ ಎಂದು ಹೇಳಿದರು. ಆಗ ಕಿರಿಯ ಅಭಿಯಂತರರು ಈಗಾಗಲೇ ವಿದ್ಯುತ್ ಅಭಿಯಂತರರವರ ಜೊತೆ ಮಾತನಾಡಿದ್ದು, ಸೋಡಿಯಂ ವ್ಯಾಪೂರ್ ಬಲ್ಬ್‌ಗಳನ್ನು ಅಳವಡಿಸಿ ಕೊಡಲಾಗುವುದೆಂದು ಹೇಳಿದರು.

ಶ್ರೀಮತಿ ಶಾಂತ ರವರು ಬಾಲಾಜಿ ಬಡಾವಣೆ ನಿವಾಸಿ **ರಸ್ತೆಗಳಲ್ಲಿ** ಯುಜಿಡಿ ಲೈನ್ ಅಳವಡಿಸುತ್ತಿದ್ದು, ರಸ್ತೆಯ ಮೇಲಿರುವ ಮಣ್ಣನ್ನು ತೆಗೆದಿಲ್ಲವೆಂದು ಹೇಳಿದರು. ಅದಕ್ಕೆ ಕಿರಿಯ ಅಭಿಯಂತರರು ಶೀಘ್ರದಲ್ಲಿ ಮಣ್ಣನ್ನು ತೆರವು ಗೊಳಿಸಲಾಗುವುದೆಂದು ಹೇಳಿದರು.

ನೋಡೆಲ್ ಅಧಿಕಾರಿಗಳು ಕಸದ ಬ್ಲಾಕ್‌ಸ್ಪಾಟ್‌ನ ವಿಷಯದ ಬಗ್ಗೆ ಚರ್ಚಿಸಿದರು. ಶ್ರೀಮತಿ. ಕವಿತ ಕಿ.ಆ.ನಿ ರವರು ಎರಡು ಜಾಗಗಳಲ್ಲಿ ಬ್ಲಾಕ್‌ಸ್ಪಾಟ್‌ನ ಸಮಸ್ಯೆಯು ಬಗೆಹರಿದಿದೆ ಎಂದು ಹೇಳಿದರು. ಸರೋವರ ಬಡಾವಣೆ, ಬಾಲಾಜಿ ಬಡಾವಣೆಗಳಲ್ಲಿ ಕಸದ ಸಮಸ್ಯೆಯು ಶೀಘ್ರದಲ್ಲಿ ಬಗೆಹರಿಸುವುದಾಗಿ ತಿಳಿಸಿದರು. ಶ್ರೀಮತಿ ಶಾಂತ ರವರು ಬ್ಲಾಕ್ ಸ್ಪಾಟ್‌ಗಳಲ್ಲಿ ಕ್ಯಾಮೆರಾಗಳನ್ನು ಅಳವಡಿಸಿ ಕೊಡಲು ಕೇಳಿದರು.

ಶ್ರೀಮತಿ. ಕವಿತ ಕಿ.ಆ.ನಿ ರವರು ಮಾತನಾಡುತ್ತಾ ಯೂಕೋ ಬ್ಯಾಂಕ್ ಹತ್ತಿರ ಇರುವ ಡ್ರೈ ಸೆಂಟರ್‌ನಲ್ಲಿ ಪಾರ್ಕ್‌ನ ಪೆನ್ಸಿಂಗ್ ಹಾಳಾಗಿರುತ್ತದೆ. ಹಾಗಾಗಿ ಸಾರ್ವಜನಿಕರು ಕಸವನ್ನು ಪಾರ್ಕ್‌ನಲ್ಲಿ ಹಾಕುತ್ತಾರೆ ಎಂದು ಹೇಳಿದರು. ಕಿರಿಯ ಅಭಿಯಂತರರು Project ರವರಿಂದ ಪೆನ್ಸಿಂಗ್ ಹಾಕಿಸಿ ಕೊಡುವುದಾಗಿ ಹೇಳಿದರು.

ಶ್ರೀಮತಿ. ರಶ್ಮಿ ತೋಟಗಾರಿಕೆ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರು ಮಾತನಾಡುತ್ತಾ ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಎರಡು ಉದ್ಯಾನಗಳು ಬರುತ್ತವೆಂದು ತಿಳಿಸಿದರು. ಉಳಿದ ಉದ್ಯಾನವನಗಳಿಗೆ ಸ್ವಚ್ಛ ಮಾಡಲು ಪೌರಕಾರ್ಮಿಕರನ್ನು ಬಳಸಿ ಕೊಳ್ಳಬೇಕೆಂದು ನೋಡೆಲ್ ಅಧಿಕಾರಿಗಳು ತಿಳಿಸಿದರು.

ಶ್ರೀ. ಡಾ॥ ಪ್ರೇಮಾನಂದ್ ರವರು ಮಾತನಾಡುತ್ತಾ, ಕೋವಿಡ್-19 ಈ ರೋಗವನ್ನು ತಡೆಗಟ್ಟಲು ರೋಗ ಹರಡುವಿಕೆಯ ಸರಪಳಿಯನ್ನು ತಡೆಯಲು ಸೋಂಕಿತರನ್ನು ಅತೀ ಬೇಗನೆ ಪತ್ತೆ ಮಾಡಲು ಪರೀಕ್ಷೆಗಳನ್ನು ನಡೆಸುವುದು ಅತ್ಯವಶ್ಯಕವಾಗಿರುವುದರಿಂದ ವಾರ್ಡ್ ಸಂಖ್ಯೆ:08ರ ಎಲ್ಲಾ ಆರ್‌ಡಬ್ಲ್ಯೂಎ ರವರುಗಳು ಸ್ವಯಂ ಪ್ರೇರಿತರಾಗಿ ತಮ್ಮ ಅಪಾರ್ಟ್‌ಮೆಂಟ್, ವಾಸಿಸುವ ಸ್ಥಳಗಳಲ್ಲಿ ಬಡಾವಣೆಗಳಲ್ಲಿ ಸುತ್ತಮುತ್ತಲಿನ ಜನರನ್ನು ಪರೀಕ್ಷೆ ಒಳಪಡಲು ಸೂಕ್ತವಾದ ತಿಳುವಳಿಕೆಯನ್ನು ನೀಡಿ ಹೆಚ್ಚು ಪರೀಕ್ಷೆಗಳನ್ನು ನಡೆಸಲು ಸಹಕಾರವನ್ನು ನೀಡುವಂತೆ ಕೋರಿದರು. ಇಲ್ಲಿವರೆವಿಗೂ 20 ಸಾವಿರ ಪರೀಕ್ಷೆಗಳು ನಡೆದಿದ್ದು, 996 ಪಾಸಿಟಿವ್ ಪ್ರಕರಣ ಕಂಡುಬಂದಿದೆ ಎಂದು ಹೇಳಿದರು ಹಾಗೂ ಇನ್ನೂ 40 ಸಾವಿರ ಪರೀಕ್ಷೆಗಳು

ನಡೆಯಬೇಕಾಗಿದೆ ಎಂದು ಹೇಳಿದರು. ನೋಡೆಲ್ ಅಧಿಕಾರಿಗಳು ಪರೀಕ್ಷೆಗಳು ಇನ್ನೂ ಉತ್ತಮವಾಗಿ ಆಗಾಬೇಕೆಂದು ಹೇಳಿದರು ಹಾಗೂ ನಾಗರೀಕರ ಸಹಾಯವನ್ನು ತೆಗೆದು ಕೊಳ್ಳಬೇಕೆಂದು ಹೇಳಿದರು

ಶ್ರೀ ಗುರು, ಕಾ.ಪಾ.ಅ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

(ಪ್ರವೀಣ್ ಎ.ಆರ್.)
ಕಾರ್ಯದರ್ಶಿಗಳು ಮತ್ತು
ಕಿರಿಯ ಅಭಿಯಂತರರು
ವಾರ್ಡ್ 8, ಕೊಡಿಗೇಹಳ್ಳಿ ಉಪ ವಿಭಾಗ

21/11/2020.
(ಶ್ರೀ ಗುರು)
ಕಾರ್ಯಪಾಲಕ ಅಭಿಯಂತರರು ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ:08

<u>ಪ್ರತಿಯನ್ನು:-</u>

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೊಡಿಗೇಹಳ್ಳಿ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
9. ಕಛೇರಿ ಕಡತಕ್ಕೆ.